ಹಂಚಿಬಿಟ್ಟಿರುವುದರಿಂದ ಅಲ್ಲಿಗೆ ಬೇರೆ ಯಾರೂ ಕೂಡ ಬರುತ್ತಿಲ್ಲ, ಮತ್ತು ವಿಶೇಷವಾಗಿ ಆರ್.ಎಂ.ಸಿ.ಯಾರ್ಡ್‌ನಲ್ಲಿ ಮತ್ತು ಎ.ಪಿ.ಎಂ.ಸಿ ದಿವಸಕ್ಕೆ ನಾಲ್ಕು ಲಕ್ಷ ರೂಪಾಯಿ ವಹಿವಾಟು ಮಾಡುವವರೂ ಕೂಡ ಕುಡಿಯುವ ನೀರಿಲ್ಲದೆ, ಶೌಚಾಲಯ ಇಲ್ಲದೆ ಅಲ್ಲಿರುವಂಥ ಗೋಡೆಗಳನ್ನು ಮರಗಳನ್ನು ಇವೊತ್ತು ಆಶ್ರಯಿಸಬೇಕಾದ ಪರಿಸ್ಥಿತಿ ಇದೆ. ಒಟ್ಟಾರೆ ಎ.ಪಿ.ಎಂ.ಸಿಯದು ಏನು ವ್ಯವಹಾರ ನಡೆಯುತ್ತಿದೆ ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳಬೇಕೆಂದಿದ್ದೀರಿ ಅದರ ಬಗ್ಗೆ ಉತ್ತರ ಕೊಡಿ.

ಶ್ರೀ ಎಚ್.ನಾಗಪ್ಪ : ಸನ್ಮಾನ್ಯ ಅಧ್ಯಕ್ಷರೆ, ಒಬ್ಬ ವ್ಯಕ್ತಿಗೆ 18-20 ಅಂಗಡಿಗಳನ್ನು ಕೊಟ್ಟಿದ್ದಾರೆ ಎಂದು ಹೇಳುತ್ತೀರಿ, ಅದರ ಬಗ್ಗೆ ತಾವು ಮಾಹಿತಿಯನ್ನು ಕಳುಹಿಸಿಕೊಟ್ಟರೆ ನಾನು ಪರಿಶೀಲನೆ ಮಾಡುತ್ತೇನೆ. ಹಿಂದೆ ಆಗಿರತಕ್ಕಂಥ ವಿಷಯಗಳು ನನಗೂ ಕೂಡ ಗೊತ್ತಿಲ್ಲ ಅದನ್ನು ತಾವು ಕಳುಹಿಸಿಕೊಟ್ಟರೆ ಪರಿಶೀಲನೆ ಮಾಡುತ್ತೇನೆ ಎಂದು ಈ ಸಂದರ್ಭದಲ್ಲಿ ತಮಗೆ ತಿಳಿಸುತ್ತಾ, ಕೆಲವು ಸೌಕರ್ಯಗಳಿಲ್ಲ ಎಂದು ತಿಳಿಸಿದ್ದೀರಿ ಅದನ್ನು ಆದಷ್ಟು ಜಾಗ್ರತೆ ಮಾಡಿಸಿಕೊಡುವುದಕ್ಕೆ ನಾನು ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ಸುರೇಶಕುಮಾರ್ : ಮಾನ್ಯ ಅಧ್ಯಕ್ಷರೆ, ಈ ಎ.ಪಿ.ಎಂ.ಸಿ ಒಳಗಡೆ ಬಹಳಷ್ಟು ಸೆಕ್ಯುರಿಟಿಯ ಅಭಾವ ಇದೆ. ರೆಗ್ಯುಲರ್‌ಆಗಿ ಅಲ್ಲಿ ದರೋಡೆ ನಡೆಯುತ್ತಾ ಇದೆ, ಅಲ್ಲಿ ಬೆಳಕಿನ ಅಭಾವದಿಂದ ದರೋಡೆಗಳು ನಡೆಯುವುದು ಮಾಮೂಲಾಗಿದೆ. ಜೊತೆಗೆ ಯಾರ್ಯಾರು ರೈಸ್ ಮರ್ಚೆಂಟ್ಸ್ ಅಲ್ಲಿನ ಆರ್ಗ್ನೈಸ್ಡ್ ಗೂಂಡಾಗಳಿಗೆ, ಮಾಫಿಯಾಗಳಿಗೆ ದುಡ್ಡು ಕೊಡುವುದಿಲ್ಲ ಅವರ ಮೇಲೆ ಸುಮ್ಮಸುಮ್ಮನೆ ರೈಡ್‌ಮಾಡಿಸುವ ವಿಚಾರ ತಮ್ಮ ಗಮನಕ್ಕೆ ಬಂದಿರಬಹುದು. ಇದರ ಬಗ್ಗೆ ಸಿ.ಓ.ಡಿ ತನಿಖೆ ನಡೆದು ವರದಿಯನ್ನೂ ಮಾನ್ಯಮಂತ್ರಿಗಳಿಗೆ ಸಲ್ಲಿಸಿದ್ದಾರೆ. ಇದರ ಬಗ್ಗೆ ತಾವೇನು ಕ್ರಮ ತೆಗೆದುಕೊಂಡಿದ್ದೀರಿ ?

ಶ್ರೀ ಹೆಚ್. ನಾಗಪ್ಪ : ಸಿ.ಓ.ಡಿ.ಯಿಂದ ವಿಚಾರಣೆಯಾಗಿರುವ ವರದಿ ಪ್ರತಿ ನಮಗೆ ಇನ್ನೂ ಬಂದಿಲ್ಲ. ಕೆಲವು ಕಡೆ ಕಳ್ಳತನವಾಗಿರತಕ್ಕಂಥದ್ದು ನಮ್ಮ ಗಮನಕ್ಕೆ ಬಂದಿದೆ, ಆ ರೀತಿ ಆಗದ ಹಾಗೆ ಅದಕ್ಕೆ ಸೆಕ್ಯುರಿಟಿಯನ್ನು ಒದಗಿಸಲಾಗುವುದು.

ಅಧ್ಯಕ್ಷರು : ರಾಮಕೃಷ್ಣರವರೆ, ಮಂತ್ರಿಗಳು ಆ ಸದನದಲ್ಲಿರುವುದರಿಂದ ತಮ್ಮ ಪ್ರಶ್ನೆಯನ್ನೂ ಕೂಡ ತಥೈಹಿಡಿಯಲಾಗಿದೆ.

ಮುಧೋಳ ತಾಲ್ಲೂಕಿನ ಸಾಗುವಳಿ ಜಮೀನು.

168 - ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮುಧೋಳ ತಾಲ್ಲೂಕಿನ ರೋಗಿ, ಗುಲಗಾಲ ಜಂಬಗಿ ಮತ್ತು ಮುಳಲಿ ಗ್ರಾಮಗಳಲ್ಲಿ ಸಾಗುವಳಿ ಜಮೀನು ಸವಳು-ಜವಳು ಆಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಎಷ್ಟು ಎಕರೆ ಜಮೀನು ಸವಳು-ಜವಳು ಆಗಿದೆ ?

ಇ) ಜಮೀನು ಸವಳು-ಜವಳು ಆಗುವುದನ್ನು ತಡೆಯಲು ಸರ್ಕಾರವು ಕೈಗೊಂಡ ಕ್ರಮವೇನು ?

ಈ) ಅದಕ್ಕೆ ಬೇಕಾಗುವ ಹಣದ ಮೊತ್ತವೆಷ್ಟು ?

ಊ) ಎಷ್ಟು ದಿನಗಳಲ್ಲಿ ಪೂರ್ಣ ಹಣ ಬಿಡುಗಡೆ ಮಾಡಲಾಗುವುದು ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು) :

ಅ) ಹೌದು.

ಆ) ಮೇಲೆ ನಮೂದಿಸಿದ ಮೂರು ಗ್ರಾಮಗಳಲ್ಲಿ ಸುಮಾರು 1410 ಎಕರೆ (564 ಹೆಕ್ಟೇರ್) ಪ್ರದೇಶವು ಸವಳು ಜವಳಿನಿಂದ ತೊಂದರೆಗೊಳಗಾಗಿದೆ.

ಇ) ಸವಳು ಜವಳು ಜಮೀನು ಅಭಿವೃದ್ಧಿಪಡಿಸಲು ನಿರ್ದಿಷ್ಟವಾದ ಯಾವುದೇ ಯೋಜನೆ ಕೃಷಿ ಇಲಾಖೆಯಲ್ಲಿ ಸಧ್ಯದಲ್ಲಿ ಚಾರಿಯಲ್ಲಿರುವುದಿಲ್ಲ. ಆದರೂ ಇಲಾಖೆಯು ರೈತರಿಗೆ ಸವಳು ಜವಳು ಜಮೀನು ಉಂಟಾಗುವ ಬಗ್ಗೆ ಅವುಳಿಂದಾಗುವ ಹಾನಿ ಬಗ್ಗೆ ಹಾಗೂ ತಾಂತ್ರಿಕ ನಿವಾರಣೋಪಾಯಗಳ ಬಗ್ಗೆ ರೈತರಿಗೆ ಮಾಹಿತಿ ಮಾಡಿಕೊಡಲಾಗುತ್ತಿದೆ ಮತ್ತು ಹಾನಿಗೊಳಗಾದ ಜಮೀನುಗಳನ್ನು ತಮ್ಮ ಸ್ವಂತ ಖರ್ಚಿನಲ್ಲಿ ಅಭಿವೃದ್ಧಿ ಪಡಿಸಿಕೊಳ್ಳಲು ಮಾರ್ಗದರ್ಶನ ನೀಡಲಾಗುತ್ತಿದೆ.

ಈ) ಹಾನಿಗೊಳಗಾದ ಜಮೀನುಗಳನ್ನು ಅಭಿವೃದ್ಧಿಪಡಿಸಲು ಈ ಕೆಳಕಂಡಂತೆ ಹಣ ಬೇಕಾಗಿರುತ್ತದೆ ಎಂದು ಅಂದಾಜಿಸಿದೆ.

1.	ರೂಗಿ	-	ರೂ.7.37 ಲಕ್ಷಗಳು
2.	ಗುಲಗಾಲ ಜಂಬಗಿ	-	ಪರಿಶೀಲನೆಯಲ್ಲಿದೆ.
3.	ಮಳಲಿ	-	ರೂ.27.06 ಲಕ್ಷಗಳು.

ಊ) ಇಲಾಖೆಯಲ್ಲಿ ಸವಳು ಜವಳು ಜಮೀನುಗಳ ಅಭಿವೃದ್ಧಿಗೆ ನಿರ್ದಿಷ್ಟವಾದ ಯಾವುದೇ ಯೋಜನೆ ಚಾರಿಯಲ್ಲಿರುವುದಿಲ್ಲವಾದುದರಿಂದ ಹಣ ಬಿಡುಗಡೆ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಗೋವಿಂದ ಎಂ. ಕಾರಜೋಳ : ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ ಮೂರು ಗ್ರಾಮಗಳಲ್ಲಿ ಸುಮಾರು 1410 ಎಕರೆ ಪ್ರದೇಶವು ಸವಳು ಜವಳು ಆಗಿದೆ ಎಂದು ಹೇಳಿದ್ದಾರೆ. ಆದರೆ ಸವಳು ಜವಳು ತೆಗೆಯಲಿಕ್ಕೆ ಸರ್ಕಾರದಲ್ಲಿ ನಿರ್ದಿಷ್ಟವಾದ ಯೋಜನೆಗಳಿಲ್ಲ ಎಂದೂ ಸಹ ಹೇಳಿದ್ದಾರೆ. ಈ ಸವಳು-ಜವಳು ತೆಗೆಯಲಿಕ್ಕೆ ಮಲಪ್ರಭಾ, ಘಟಪ್ರಭಾ,ಕಾಡಾ ಯೋಜನೆಯಡಿಯಲ್ಲಿ 1997-98ನೇ ಸಾಲಿನಲ್ಲಿ ಒಂದು ಕಾರ್ಯಕ್ರಮವನ್ನು ಸರ್ಕಾರ ರೂಪಿಸುತ್ತದೆಯೇ ಎನ್ನುವುದು ಒಂದು ಪ್ರಶ್ನೆ, ಇನ್ನೊಂದು ಸವಳು -ಜವಳು ಜಮೀನು ಅಭಿವೃದ್ಧಿಗೆ ನಿರ್ದಿಷ್ಟವಾಗಿರತಕ್ಕ ಯೋಜನೆಯನ್ನು ರೂಪಿಸಲು ಸರ್ಕಾರಕ್ಕೆ ಇರತಕ್ಕಂಥ ತೊಂದರೆ ಏನು? ಮತ್ತೊಂದು ರೈತರೇ ಸವಳು-ಜವಳು ತೆಗೆಯುವುದಾದರೆ ತಾಂತ್ರಿಕ ಸಲಹೆಯನ್ನು ನೀಡುತ್ತೇವೆ ಎಂದು ಹೇಳಿದ್ದಾರೆ ಅಧ್ಯಕ್ಷರೆ ತಾಂತ್ರಿಕ ಸಲಹೆ ನೀಡಿದರೆ ಆಗುವುದಿಲ್ಲ ! ಮೂರು ಊರುಗಳಲ್ಲಿ ಸವಳು-ಜವಳು ಆಗುವುದನ್ನು ತಡೆಯಲು ಸುಮಾರು 50 ಲಕ್ಷ ರೂಪಾಯಿ ಬೇಕಾಗುತ್ತದೆ. ಸರ್ಕಾರ ರೈತರಿಗೆ ಏನಾದರು ಆರ್ಥಿಕ ನೆರವು ನೀಡಿವುದಾದರೆ ಅದನ್ನು ರೈತರೇ ಮಾಡಿಕೊಳ್ಳುವುದಕ್ಕೆ ಸಿದ್ಧರಿದ್ದಾರೆ, ಅದಕ್ಕೆ ಸರ್ಕಾರ ಒಪ್ಪುತ್ತದೆಯೇ ಎಂಬುದು ನನ್ನ ಪ್ರಶ್ನೆ.

ಶ್ರೀ ಸಿ.ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಈ ಸವಳು - ಜವಳು ಜಮೀನುಗಳನ್ನು ಸರಿಪಡಿಸುವಂಥದ್ದಕ್ಕೆ ಜಿಲ್ಲಾ ಪಂಚಾಯಿತಿಯೊಳಗೆ ಒಂದು ಯೋಜನೆಯನ್ನು ರೂಪಿಸಿ ಅವರು ಕಾರ್ಯಗತ ಮಾಡಬೇಕು ಎಂಬ ಸೂಚನೆಯನ್ನು ನೀಡಿದ್ದೇವೆ. ಅದರ ಜೊತೆಗೆ ನಮ್ಮ ರಾಜ್ಯದಲ್ಲಿ ಸುಮಾರು 24 ಸಾವಿರ ಹೆಕ್ಟೇರ್ ಸವಳು ಭೂಮಿ ಇದೆ. ಮತ್ತೆ ಸುಮಾರು 12 ಸಾವಿರ ಹೆಕ್ಟೇರ್ ಜವಳು ಭೂಮಿ ಇದೆ. ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಈ ಸಮಸ್ಯೆ ಇರುವುದರಿಂದ ಕೇಂದ್ರ ಸರ್ಕಾರಕ್ಕೆ ಒಂದು ಯೋಜನೆಯನ್ನು ಕಳುಹಿಸಿದ್ದೇವೆ. ಇದಕ್ಕೆ 9ನೇ ಪಂಚವಾರ್ಷಿಕ ಯೋಜನೆಯಲ್ಲಿ ವಿಶೇಷವಾದಂಥ ಕಾರ್ಯಕ್ರಮವನ್ನು ರೂಪಿಸಿ ನೆರವು ನೀಡಬೇಕು ಎಂಬುದನ್ನು ಕೇಳಿದ್ದೇವೆ. ಆ ಯೋಜನೆ ಮಂಜೂರಾಗುತ್ತದೆ ಎಂಬ ಆಶಾಭಾವನೆ ರಾಜ್ಯಸರ್ಕಾರಕ್ಕೆ ಇದೆ. ಆ ಯೋಜನೆಗೆ ಕೇಂದ್ರ ಸರ್ಕಾರದಿಂದ ಹಣದ ಸಹಾಯ ಬಂದಾಗ ಈ ಮೂರು ಹಳ್ಳಿಗಳಲ್ಲೂ ಸಹ ಸವಳು-ಜವಳು ಆಗಿರತಕ್ಕ ಜಮೀನುಗಳನ್ನು ಸರಿಪಡಿಸತಕ್ಕಂಥ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಗೋವಿಂದ ಎಂ. ಕಾರಜೋಳ : ನಾನು 1995-96ನೇ ಸಾಲಿನಲ್ಲಿ ಈ ಸವಳು-ಜವಳು ತೆಗೆಸುವುದಕ್ಕಾಗಿ ಕೃಷಿ ಇಲಾಖೆಯ ಅಧಿಕಾರಿಗಳೊಂದಿಗೆ ಚರ್ಚೆ ಮಾಡಿ 21 ಲಕ್ಷ ರೂಪಾಯಿಗಳ ಅಂದಾಜುಪಟ್ಟಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದೆ. ಆದರೆ 1995-96ನೇ ಸಾಲಿನಲ್ಲಿ 21 ಲಕ್ಷ ರೂಪಾಯಿಗಳನ್ನು ಕೊಡುವುದಕ್ಕಾಗುವುದಿಲ್ಲ, ಅದನ್ನು ಮುಂದಿನ ವರ್ಷ ನೋಡೋಣ ಎಂದು ಕೃಷಿ ಸಚಿವರು ನಾನು ಸ್ವತಃ ಭೇಟಿಯಾಗಿದ್ದಾಗ ಬರವಸೆ ನೀಡಿದ್ದರು. ಆದರೇ ಅದಕ್ಕೆ ಇಲ್ಲಿಯವರೆಗೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ. ಆದ್ದರಿಂದ ಅದಕ್ಕಾದರೂ ಸರ್ಕಾರ ಏನಾದರೂ ಕ್ರಮ ತೆಗೆದುಕೊಳ್ಳುತ್ತದೆಯೇ ಎಂಬ ಬಗ್ಗೆ ನಿರ್ದಿಷ್ಟ ಉತ್ತರವನ್ನು ಬಯಸುತ್ತೇನೆ.

ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷರೆ, ಕೃಷಿ ಇಲಾಖೆಯಲ್ಲಿ ಈ ಯೋಜನೆ ಇಲ್ಲ. ಮಾನ್ಯ ಸಚಿವರು ಯೋಜನೆಯಲ್ಲಿ ಇದನ್ನು ತೆಗೆದುಕೊಳ್ಳತಕ್ಕಂಥದ್ದಕ್ಕೆ ಪ್ರಯತ್ನಪಡಬಹುದು. ಬಹುಶಃ ತಾವೂ ಸಹ ಅದರಲ್ಲಿ ಸದಸ್ಯರಾಗಿದ್ದೀರಿ ಎಂದು ಅನಿಸುತ್ತದೆ. ಜಿಲ್ಲಾ ಪಂಚಾಯತ್‌ನಲ್ಲೂ ಸಹ ತಾವು ಸದಸ್ಯರಾಗಿದ್ದೀರಿ, ನಿಮ್ಮ ಸಲಹೆಗಳನ್ನು ಈ ಎರಡೂ ಸಂಸ್ಥೆಗಳ ಮುಂದಿಟ್ಟು ಅಲ್ಲಿಂದ ಹಣ ಪಡೆಯತಕ್ಕಂಥದ್ದಕ್ಕೆ ತಾವು ಪ್ರಯತ್ನ ನಡೆಸಬೇಕೆಂದು ನಾನೂ ಸಹ ಅವರಿಗೆ ಸಲಹೆಯನ್ನು ನೀಡುತ್ತಾ ಸಂಬಂಧಪಟ್ಟ ಸಚಿವರಿಗೆ ನಾನೂ ಇದನ್ನು ತಿಳಿಸುತ್ತೇನೆ.

ಶ್ರೀ ಜಗದೀಶ್ ತಿಮ್ಮನಗೌಡ ಪಾಟೀಲ್ : ಮಾನ್ಯ ಅಧ್ಯಕ್ಷರೆ, ಬೀಳಗಿ ಮತಕ್ಷೇತ್ರದ ಬಿಸನಾಳ ಗ್ರಾಮದಲ್ಲಿ ಸಾವಿರಾರು ಎಕರೆ ಭೂಮಿ ಈ ಸವಳು-ಜವಳಿನಿಂದ ಕೆಟ್ಟುಹೋಗುವುದಲ್ಲದೆ ಅಲ್ಲಿ ಸ್ಯಾಂಡಕ್ವಿಕ್ ಫಾರ್ಮೇಷನ್ ಆಗಿದೆ. ಅಲ್ಲಿ ಮನುಷ್ಯರಾಗಲೀ, ದನಗಳಾಗಲೀ ಹೋದರೆ 20 ಫೀಟ್ ಯಾವುದೇ ಫುಶೆರ್ ಇಲ್ಲದೆ ಒಳಗಡೆ ಹೋಗುತ್ತವೆ, ಅಲ್ಲಿ ಸಾಕಷ್ಟು ಘಟನೆಗಳು ಸಂಭವಿಸಿದ್ದು ಕಳೆದ ಎಂಟು ವರ್ಷಗಳಿಂದ ನಾನು ಪ್ರಯತ್ನ ಮಾಡುತ್ತಿದ್ದೇನೆ ನಾನು ಶಾಸಕನಾದ ನಂತರ ಮೂರು ಪ್ರಶ್ನೆಗಳನ್ನು ಈ ಅಧಿವೇಶನದಲ್ಲಿ ಹಾಕಿದ್ದೇನೆ. ಈ ಬಗ್ಗೆ ಕಾಡಾ ಅಭಿವೃದ್ಧಿ ಅಧಿಕಾರಿಗಳನ್ನು ಕೇಳಿದಾಗ ನಾವು ಪಾಲಿಟ್ ಪ್ರಾಜೆಕ್ಟ್ ಮಾಡಿಕೊಂಡಿದ್ದೇವೆ. ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಆಶ್ವಾಸನೆ ನೀಡುತ್ತಿದ್ದಾರೆ. ದಯಮಾಡಿ ಇದಕ್ಕೆ ಬೇಗನೆ ಒಂದು ಕಾರ್ಯಕ್ರಮವನ್ನು ರೂಪಿಸಿಕೊಳ್ಳಿ. ಬಿಹಾರ ರಾಜ್ಯದಲ್ಲಿ ಒಂದು, ಕರ್ನಾಟಕ ರಾಜ್ಯದಲ್ಲಿ ಒಂದು, ಹೀಗೆ ಎರಡು ಪಾಲಿಟ್ ಪ್ರಾಜೆಕ್ಟ್ ಎಂದು ತಿಳಿದುಕೊಂಡು ಇದನ್ನು

ಜಾಗತಿಕ ಮಟ್ಟದಲ್ಲಿ ತೆಗೆದುಕೊಂಡಿದ್ದಾರೆ ಹಾಗೆಯೇ ಇದಕ್ಕಾಗಿ ಈ ಕಾರ್ಯಕ್ರಮವನ್ನು ರೂಪಿಸಿದ್ದಾರೆ, ಆದುದರಿಂದ ಅದನ್ನು ಪ್ರಾರಂಭಿಸಲು ತಾವು ಕ್ರಮ ಕೈಗೊಳ್ಳುತ್ತೀರಾ ಎಂದು ತಮ್ಮಲ್ಲಿ ಕೇಳುತ್ತೇನೆ.

ಶ್ರೀ ಸಿ. ಬೈರೇಗೌಡ : ಈಗಾಗಲೇ ಉತ್ತರವನ್ನು ನೀಡಿದ್ದೇನೆ. ಬೇರೆ ಇಲಾಖೆಗಳಲ್ಲೂ ಈ ಬಗ್ಗೆ ಪ್ರಯತ್ನಪಡಬೇಕೆಂದು ಹೇಳುತ್ತೇನೆ. ಒಂದು ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುವುದೇನೆಂದರೆ, ರೈತರು ನೀರಾಗಲೀ ಮಣ್ಣಾಗಲೀ, ಯಾವುದೇ ಆಗಲೀ ಅಥವಾ ಯಾವುದೇ ವ್ಯವಸಾಯಕ್ಕೆ ಬಳಸಿಕೊಳ್ಳುವಂಥದ್ದಾಗಲೀ ಅದನ್ನು ಸಮರ್ಪಕವಾಗಿ ವೈಜ್ಞಾನಿಕವಾಗಿ ಅವರು ಬಳಕೆ ಮಾಡಿಕೊಳ್ಳಬೇಕು. ಅದರ ದುರ್ಬಳಕೆ ಆದಾಗ ಈ ರೀತಿ ಆಗುತ್ತದೆ. ನೀರಿನ ದುರ್ಬಳಕೆ ನಮ್ಮ ರಾಜ್ಯದಲ್ಲಿ ಯಥೇಚ್ಛವಾಗಿ ನಡೆಯುತ್ತಾ ಇದೆ, ಗೊಬ್ಬರದ ದುರ್ಬಳಕೆಯೂ ಕೂಡ ಯಥೇಚ್ಛವಾಗಿ ನಮ್ಮ ರಾಜ್ಯದಲ್ಲಿ ನಡೆಯುತ್ತಾ ಇದೆ. ಆದರೆ ಇಲಾಖೆ ಕಣ್ಣುಮುಚ್ಚಿಕೊಂಡು ಕುಳಿತಿಲ್ಲ, ಇದನ್ನು ಇಲಾಖೆಯಿಂದ ಸರಿಪಡಿಸತಕ್ಕಂಥ, ರೈತರಿಗೆ ತಿಳುವಳಿಕೆ ಕೊಡತಕ್ಕಂಥ ಕೆಲಸವನ್ನೂ ಸಹ ಮಾಡುತ್ತಿದೆ, ಪ್ರಯತ್ನವನ್ನೂ ನಡೆಸುತ್ತಾ ಇದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಅಧ್ಯಕ್ಷರೆ, ಅವರು ಹೇಳುವುದು ವಿಚಿತ್ರವಾಗಿ ಕಾಣುತ್ತಿದೆ. ರೈತರೆಲ್ಲರೂ ಬೈರೇಗೌಡರ ರೀತಿ ರೈತರಿಲ್ಲ. ಹೆಬ್ಬೆಟ್ಟಿನ ರೈತರಿದ್ದಾರೆ, ಓದುಬರಹ ತಿಳಿಯದೇ ಇರತಕ್ಕಂಥ ರೈತರಿದ್ದಾರೆ. ಆ ರೈತರ ಭೂಮಿಗೆ ಹೊಸದಾಗಿ ನೀರು ಬಂದಾಗ ಹೇಗೆ ಕೃಷಿ ಮಾಡಬೇಕು ಎಂಬ ತಿಳುವಳಿಕೆ ಇಲ್ಲ. ಆ ತಿಳುವಳಿಕೆಯನ್ನು ಕೊಟ್ಟರೆ ತಾನೆ ಹೇಗೆ ಉಪಯೋಗ ಮಾಡಿಕೊಳ್ಳಬೇಕೆನ್ನುವುದು ಗೊತ್ತಾಗುವುದು. ಆ ಕೆಲಸವನ್ನು ಇಲಾಖೆಯಿಂದ ಮಾಡಿಸುವುದು ಬಿಟ್ಟು ಅವರು ಉಪಯೋಗ ಮಾಡಿಕೊಳ್ಳುವುದಕ್ಕೆ ಬರುತ್ತಿಲ್ಲ, ಇದನ್ನು ಮಾಡಿಕೊಳ್ಳುವುದಕ್ಕೆ ಬರುತ್ತಿಲ್ಲ, ಮತ್ತೊಂದು ಮಾಡಿಕೊಳ್ಳುವುದಕ್ಕೆ ಬರುತ್ತಿಲ್ಲ ಎಂದು ನೀವು ಸುಮ್ಮನೆ ರೈತರಿಗೆ ಆಕಾಶ ತೋರಿಸಿದರೆ ಹೇಗೆ?

ಶ್ರೀ ಸಿ.ಬೈರೇಗೌಡ : ಇಲಾಖೆ ಇರತಕ್ಕಂಥದ್ದೇ ರೈತರಿಗೆ ಸಕಾಲಿಕವಾದಂಥ ಮಾಹಿತಿಯನ್ನು ಕೊಡುವುದಕ್ಕೆ.

ಆಳಂದ್‌ನಲ್ಲಿ ಕೃಷಿ ಮಾರುಕಟ್ಟೆ ಸಮಿತಿ ಕಟ್ಟಡಗಳನ್ನು ಉಪಯೋಗಿಸುವ ಬಗ್ಗೆ.

169 - ಶ್ರೀ ಸುಭಾಷ್ ಆರ್. ಗುತ್ತೇದಾರ್ (ಆಳಂದ) : ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಳಂದ ಪಟ್ಟಣದಲ್ಲಿ ಕೃಷಿ ಮಾರುಕಟ್ಟೆ ಕಟ್ಟಡಗಳು ಕಟ್ಟಿಸಿ 2 ವರ್ಷಗಳಾದರೂ ಉಪಯೋಗಿಸದಿರಲು ಕಾರಣಗಳೇನು?

ಆ) ಕೃಷಿ ಮಾರುಕಟ್ಟೆಯಲ್ಲಿ ವ್ಯವಹಾರ ಪ್ರಾರಂಭಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಹೆಚ್. ನಾಗಪ್ಪ (ಕೃಷಿ ಮಾರುಕಟ್ಟೆ ರಾಜ್ಯಸಚಿವರು) :

ಅ) ಕಛೇರಿ ಕಟ್ಟಡವನ್ನು ಉಪಯೋಗಿಸಲಾಗುತ್ತಿದೆ. ಉಳಿದ ಕಟ್ಟಡಗಳನ್ನು ಉಪಯೋಗಿಳಲು ಕ್ರಮಕೈಗೊಳ್ಳಲಾಗುತ್ತಿದೆ.

ಹೌದು.